# ಮೂರು ಸಿನಿಮಾ ನೂರು ಕನಸು

**ಐಟಿ ಕೆಲಸ ತೊರೆದು ಸಿನಿಮಾರಂಗ ಹುಡುಕಿ ಬಂದಿದ್ದ ನಟಿ ಬೃಂದಾ ಆಚಾರ್ಯ ಅಭಿನಯದ 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾ ಇದೇ ತಿಂಗಳು ಬಿಡುಗಡೆಯಾಗುತ್ತಿದೆ. 'ಪ್ರೇಮಂ ಪೂಜ್ಯಂ', 'ಜೂಲಿಯೆಟ್ 2' ಸಿನಿಮಾಗಳ ನಂತರ ತೆರೆಕಾಣುತ್ತಿರುವ ಈ ಸಿನಿಮಾ ತಮ್ಮನ್ನು ನಿರೂಪಿಸಿಕೊಳ್ಳಲು ಒಳ್ಳೆಯ ವೇದಿಕೆಯಾಗಲಿರುವ ವಿಶ್ವಾಸ ಅವರದ್ದು.**

**■ ಸುಮಲತಾ ಎನ್.**



'ಲಾರ್ಜರ್ ದ್ಯಾನ್ ಲೈಫ್ ರೋಲ್ಸ್ ಅಂತಾರಲ್ಲ, ಅಂಥದ್ದೊಂದು ಪಾತ್ರ ಮಾಡಬೇಕು...' ಐಟಿ ಕ್ಷೇತ್ರ ಬಿಟ್ಟು ಸಿನಿಮಾರಂಗಕ್ಕೆ ಹಾದಿ ಬದಲಿಸಿ ಬಂದಿದ್ದ ಹೊನ್ನಾವರದ ಬಳಕೂರಿನ ಬೆಡಗಿ ಬೃಂದಾ ಆಚಾರ್ಯ ಅವರಲ್ಲಿ ಸಿನಿಮಾ ಪಾತ್ರಗಳ ಬಗ್ಗೆ ಇಂಥದ್ದೊಂದು ಅಪೇಕ್ಷೆ ಚಿತ್ರರಂಗಕ್ಕೆ ಕಾಲಿಟ್ಟ ದಿನದಿಂದಲೂ ಇದೆ.

'ಪ್ರೇಮಂ ಪೂಜ್ಯಂ', 'ಜೂಲಿಯೆಟ್ 2' ಸಿನಿಮಾಗಳಲ್ಲಿ ನಟಿಸಿದ್ದ ಅವರ ಮೂರನೇ ಸಿನಿಮಾ 'ಕೌಸಲ್ಯಾ ಸುಪ್ರಜಾ ರಾಮ' ಇದೇ ಜುಲೈ 28ಕ್ಕೆ ತೆರೆಕಾಣುತ್ತಿದೆ. ಈ ಚಿತ್ರದಲ್ಲಿ, ಕಾಲೇಜು ಹುಡುಗಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವ ಬೃಂದಾ ಅವರಿಗೆ ತಮ್ಮ ಮೂರನೇ ಸಿನಿಮಾದ ಬಗ್ಗೆ ಉತ್ಸಾಹವೂ ಹೆಚ್ಚಿದೆ.

ಮೊದಲ ಸಿನಿಮಾದಲ್ಲಿ ನಟ ಪ್ರೇಮ್ ಜೊತೆ ನಟಿಸಿದ ಅವರಲ್ಲಿ ಸಿನಿಮಾ ಬಗೆಗಿನ ಪ್ರೀತಿ ಇನ್ನಷ್ಟು ಹೆಚ್ಚಾಯಿತು. ಈ ಪ್ರೀತಿ, ಅವರನ್ನು 'ಜೂಲಿಯೆಟ್ 2' ಆ್ಯಕ್ಷನ್ ಸಿನಿಮಾದಲ್ಲಿ ನಟಿಸಲು ಪ್ರೇರಣೆಯಾಯಿತು.

'ಚಿತ್ರರಂಗದ ಬಗ್ಗೆ ಏನೂ ತಿಳಿದಿರಲಿಲ್ಲ. ಏನೋ ಹೆದರಿಕೆ. ಭಂಡ ಧೈರ್ಯದೊಂದಿಗೆ ಬಂದಿದ್ದೆ. ಐಟಿ ಕೆಲಸ ಬಿಟ್ಟು ಮನೆಯವರನ್ನು ಒಪ್ಪಿಸಿ ಸಿನಿಮಾರಂಗಕ್ಕೆ ಬರುವುದು ಸುಲಭವಿರಲಿಲ್ಲ. ನನ್ನ ಅದೃಷ್ಟಕ್ಕೆ ಒಳ್ಳೆ ನಿರ್ದೇಶಕರು, ತಂಡ ಸಿಕ್ಕಿತು. ಪ್ರತಿ ತಂಡದೊಂದಿಗೆ ಕೆಲಸ ಮಾಡುತ್ತಾ ವೃತ್ತಿ ಬದುಕಿಗೆ ಅವಶ್ಯವಿರುವ ಪಾಠಗಳನ್ನು ಕಲಿತಿದ್ದೇನೆ' ಎಂದು ಹೇಳುತ್ತಾರೆ ಬೃಂದಾ.

ಇದು ರಿಯಲಿಸ್ಟಿಕ್ ಸಿನಿಮಾಗಳ ಕಾಲ ಎನ್ನುವ ಅವರು, ತಮ್ಮ ಪಾತ್ರಗಳೂ ರಿಯಲಿಸ್ಟಿಕ್ ರೀತಿಯಲ್ಲಿರಬೇಕು ಎಂದು ಬಯಸುತ್ತಾರೆ.

'ನನ್ನನ್ನು ಪಳಗಿಸುವಂಥ ಪಾತ್ರಗಳನ್ನು ಬಯಸುತ್ತೇನೆ. ಪೌರಾಣಿಕ, ಐತಿಹಾಸಿಕ ಪಾತ್ರಗಳೆಂದರೆ ತುಂಬಾ ಪ್ರೀತಿ. ಲಾರ್ಜರ್ ದ್ಯಾನ್ ಲೈಫ್ ರೋಲ್ಸ್ ಎಂದು ಹೇಳುತ್ತಾರಲ್ಲ, ಅಂಥ ಪಾತ್ರ ಮಾಡಬೇಕೆಂದು ದೊಡ್ಡ ಆಸೆ. ಅಂಥ ಪಾತ್ರಕ್ಕೆ ಅಷ್ಟೇ ತಯಾರಿಯೂ ಬೇಕು' ಎನ್ನುತ್ತಾರೆ.

ಸಿನಿಮಾ ರಂಗದ ಬಗ್ಗೆ ಆಸೆ ಇದ್ದರೆ ಸಾಲದು, ವಸ್ತುನಿಷ್ಠವಾಗಿರುವುದೂ ಅಷ್ಟೇ ಮುಖ್ಯ ಎನ್ನುವುದು ಬೃಂದಾ ಅಭಿಪ್ರಾಯ. 'ಸಿನಿಮಾ ಎಲ್ಲರಿಗೂ ಸುಲಭ ಕ್ಷೇತ್ರವಲ್ಲ. ಒಂದು ಹಂತಕ್ಕೆ ಬರುವವರೆಗೂ ಬೇರೆ ರೀತಿ ಕಾಣುತ್ತದೆ. ಕೆಲವರಿಗೆ ಯಶಸ್ಸು ಸಿಗುತ್ತದೆ. ಒಬ್ಬೊಬ್ಬರಿಗೆ ಹಾಗಿರುವುದಿಲ್ಲ. ಪ್ರತಿ ಹಂತದಲ್ಲೂ ಸವಾಲುಗಳನ್ನು ದಾಟಿಕೊಂಡೇ ಬರಬೇಕಾಗುತ್ತದೆ. ಆದರೆ ಈ ಸವಾಲಿನಲ್ಲೇ ಜೀವನ ಸೌಂದರ್ಯವಿದೆ. ಎಲ್ಲ ಆರಾಮಾಗಿ ನಡೆದುಕೊಂಡು ಹೋಗಿಬಿಟ್ಟರೆ ಬೇರೇನಿರುತ್ತದೆ? ಪ್ರತಿಯೊಂದು ಅನುಭವವೂ ನನಗೆ ಪಾಠವೇ' ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ.

ಮಧ್ಯಮ ವರ್ಗದ ಕುಟುಂಬದಿಂದ ಬಂದ ಅವರಿಗೆ ಸಹಜವಾಗಿ, 'ಸಿನಿಮಾ ಕ್ಷೇತ್ರ ನಮ್ಮಂಥವರಿಗಲ್ಲ' ಎಂಬ ಅಭಿಪ್ರಾಯವೇ ಎಲ್ಲ ಕಡೆಯಿಂದ ಕೇಳಿಬಂದಿತ್ತು. ಅಪ್ಪ ಅಮ್ಮ ಶಿಕ್ಷಕರು. ಒಳ್ಳೆ ಸಂಬಳ, ಸೆಟಲ್ಡ್ ಕೆಲಸ, ಆರಾಮಾಗಿ ದುಡಿದು ಹಣ ಗಳಿಸುವ ದಾರಿ ಬಿಟ್ಟು ಸಿನಿಮಾ ದಾರಿ ಏಕೆ ಎಂದು ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದ್ದರು ಕೂಡ. ಆದರೆ ಈ ಎಲ್ಲದರ ಹೊರತಾಗಿ ಬೃಂದಾ ಅವರನ್ನು ಕಾಡಿದ್ದು ಬೇರೇನನ್ನೋ ಮಾಡಬೇಕೆಂಬ ತುಡಿತ.

ತಾವು ಚಿಕ್ಕಂದಿನಲ್ಲಿ ಕಲಿತ ನೃತ್ಯವೇ ಈ ಸಿನಿಮಾ ಪ್ರೀತಿಗೆ ಮೂಲ ಕಾರಣ ಎನ್ನುತ್ತಾರೆ ಅವರು. ನೃತ್ಯದಿಂದ ವೇದಿಕೆ ಹತ್ತುವುದು ಸಲೀಸಾಯಿತು. ಆ ವೇದಿಕೆ, ಆತ್ಮವಿಶ್ವಾಸವನ್ನು ಕೊಟ್ಟಿತ್ತು. ಸ್ನೇಹಿತರು, ಅಕ್ಕನ ಪ್ರೋತ್ಸಾಹ ಅವರನ್ನು ಸಿನಿಮಾ ಹಾದಿಗೆ ತಂದು ನಿಲ್ಲಿಸಿತ್ತು.

ಒಳ್ಳೆಯ ಸಿನಿಮಾಗಳಲ್ಲಿ ನಟಿಸಬೇಕು ಎಂಬುದಷ್ಟೇ ನನ್ನಾಸೆ ಎಂದು ನಗುವ ಅವರು, ಈ ಸಿನಿಮಾ ಮಾಡಬೇಕು ಎಂದು ಈ ಕ್ಷಣಕ್ಕೆ ಅನ್ನಿಸಿದರೆ ಮಾಡುತ್ತೇನೆ. ಒಳ್ಳೆಯ ಸಿನಿಮಾ ಮಾಡಿದ ಖುಷಿ ನನಗೆ ಬೇಕಷ್ಟೆ ಎಂದು ಹೇಳುತ್ತಾರೆ. ■